# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 36
2. ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ(ವಿಧಾನಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 08.12.2025
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಪ್ರಸ್ತುತ ಮಂಜೂರಾಗಿರುವ ವೈದ್ಯಕೀಯ ಹುದ್ದೆಗಳ ಸಂಖ್ಯೆ ಎಷ್ಟು; ಹಾಗೂ ಇನ್ನಿತರೆ ಪ್ಯಾರ ಮೆಡಿಕಲ್, ತಾಂತ್ರಿಕ, ಸಹಾಯಕ ಸಿಬ್ಬಂದಿ ಮತ್ತು ಆಡಳಿತಾತ್ಮಕ ಹುದ್ದೆಗಳ ಸಂಖ್ಯೆ ಎಷ್ಟು; | ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಪ್ರಸ್ತುತ ಮಂಜೂರಾಗಿರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:-<br><br>ವೈದ್ಯಕೀಯ ಹುದ್ದೆಗಳು - 202<br>ಪ್ಯಾರಾ ಮೆಡಿಕಲ್ ಹುದ್ದೆಗಳು- 223<br>ಶುಶ್ರೂಷಕ ಸಿಬ್ಬಂದಿಗಳು - 820<br>ಆಡಳಿತಾತ್ಮಕ ಮತ್ತು ಇತರೆ ಹುದ್ದೆಗಳು -522 |
| (ಆ) | ಈ ಆಸ್ಪತ್ರೆಗೆ ಪ್ರತಿ ತಿಂಗಳು ಹೊರರೋಗಿಗಳಾಗಿ ಹಾಗೂ ಒಳರೋಗಿಗಳಾಗಿ ದಾಖಲಾಗುವ ರೋಗಿಗಳ ಸರಾಸರಿ ಸಂಖ್ಯೆ ಎಷ್ಟು; ಹಾಗೂ ಈ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಎಲ್ಲಾ ರೀತಿಯ ತಪಾಸಣೆ ಸೌಲಭ್ಯಗಳು ಲಭ್ಯವಿದೆಯೇ; ಲ್ಯಾಬ್, ಸಿಟಿಸ್ಕ್ಯಾನ್, ಎಂಆರ್‌ಐ ಹಾಗೂ ಪಿಇಟಿ ಸ್ಕ್ಯಾನ್ ಮುಂತಾದ ತಪಾಸಣೆಗಳ ವ್ಯವಸ್ಥೆ ಸಮರ್ಪಕವಾಗಿದೆಯೇ; | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಪ್ರತಿ ತಿಂಗಳು ಸರಾಸರಿ 33,333 ಕ್ಕೂ (ಪ್ರತಿ ವರ್ಷ ಅಂದಾಜು 4 ಲಕ್ಷ) ಹೆಚ್ಚು ಹೊರರೋಗಿಗಳು ನೋಂದಣಿಯಾಗುತ್ತಿರುತ್ತಾರೆ.<br><br>ಒಳರೋಗಿಗಳ ವಿಭಾಗದಲ್ಲಿ ಚಿಕಿತ್ಸೆಗಾಗಿ ಪ್ರತಿ ತಿಂಗಳು 1816ಕ್ಕೂ (ಪ್ರತಿ ವರ್ಷ ಅಂದಾಜು 21,800) ಹೆಚ್ಚು ರೋಗಿಗಳು ನೋಂದಣಿಯಾಗುತ್ತಿರುತ್ತಾರೆ. 2024-25 ನೇ ಸಾಲಿನಲ್ಲಿ ಡೇ-ಕೇರ್, ಎಮರ್ಜೆನ್ಸಿ ಮತ್ತು ಐಸಿಯುಗಳಲ್ಲಿ ಒಟ್ಟಾರೆ 95,612 ರೋಗಿಗಳು ಚಿಕಿತ್ಸೆಗಾಗಿ ನೋಂದಣಿ ಮಾಡಿಕೊಂಡಿರುತ್ತಾರೆ.<br><br>ಕೆ.ಎಂ.ಐ.ಓ ಸಂಸ್ಥೆಯಲ್ಲಿ ವಿಶ್ವದರ್ಜೆಯ ಪ್ರಯೋಗಾಲಯಗಳ ಸೌಲಭ್ಯಗಳಿದ್ದು ಕಳೆದ ಸಾಲಿನಲ್ಲಿ (2024-25) ಸುಮಾರು 25,997 ಸಿ.ಟಿ ಸ್ಕ್ಯಾನ್, 9397 ಎಂ.ಆರ್.ಐ ಮತ್ತು 13,944 ಪೆಟ್ ಸ್ಕ್ಯಾನ್ ಗಳನ್ನು ನಡೆಸಲಾಗಿದ್ದು, ಸದರಿ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. (**ಅನುಬಂಧ-1** ರಲ್ಲಿ ಅಂಕಿ ಅಂಶಗಳನ್ನು ವಿವರವಾಗಿ ಒದಗಿಸಲಾಗಿದೆ) |
| (ಇ) | ಸದರಿ ಆಸ್ಪತ್ರೆಯಲ್ಲಿ ಪ್ರಸ್ತುತ ಇರುವ ರೋಗಿ-ವೈದ್ಯರ ಅನುಪಾತ ಹಾಗೂ ರೋಗಿ-ಸಿಬ್ಬಂದಿಗಳ ಅನುಪಾತ ಎಷ್ಟು; | ಸಂಸ್ಥೆಯಲ್ಲಿ ಪ್ರತಿ ಒಬ್ಬ ವೈದ್ಯರಿಗೆ 50 ರೋಗಿಗಳ (1:50) ಅನುಪಾತದಲ್ಲಿ, ಪ್ರತಿ ಒಬ್ಬ ಶುಶೂಷಾಧಿಕಾರಿಗೆ 04 ಒಳ ರೋಗಿಗಳ (1:4) ಅನುಪಾತದಲ್ಲಿ ಹಾಗೂ ಪ್ಯಾರಾ ಮೆಡಿಕಲ್ ಸಿಬ್ಬಂದಿ 08 ರೋಗಿಗಳ (1:8) ಅನುಪಾತ ಹಾಗೂ ಇತರೆ ಎಲ್ಲಾ ಸಿಬ್ಬಂದಿಗಳನ್ನು |

| | | |
|---|---|---|
| | | ಕ್ರೂಡೀಕರಿಸಿದರೆ (1:19) ಅನುಪಾತದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸಲಾಗುತ್ತಿದೆ. |
| (ಈ) | ಸದರಿ ಆಸ್ಪತ್ರೆಗೆ ರಾಜ್ಯದಿಂದ ಮಾತ್ರವಲ್ಲದೆ ನೆರೆಯ ರಾಜ್ಯಗಳಿಂದಲೂ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವುದರಿಂದ ಆಸ್ಪತ್ರೆಯ ಮೇಲಿನ ಹೊರೆಯನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ಜಿಲ್ಲಾ ಮಟ್ಟದಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಕೈಗೊಂಡಿರುವ ಕ್ರಮಗಳೇನು? | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಪ್ರತಿ ವರ್ಷ ಸುಮಾರು ಶೇಕಡ 18.6 ರಷ್ಟು ಹೊರರೋಗಿಗಳು ಹೊಸದಾಗಿ ನೋಂದಣಿಯಾಗುತ್ತಿದ್ದಾರೆ. (**ಅನುಬಂಧ-2** ರಲ್ಲಿ ಅಂಕಿ ಅಂಶಗಳನ್ನು ವಿವರವಾಗಿ ಒದಗಿಸಲಾಗಿದೆ). ಸಂಸ್ಥೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಈಗಾಗಲೇ ಕಲ್ಬುರ್ಗಿಯಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ಸ್ಥಾಪಿಸಿದ್ದು ಸದರಿ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಲು (100 ಹಾಸಿಗೆಯ ಸಾಮರ್ಥ್ಯದಿಂದ 210 ಹಾಸಿಗೆಯ ಸಾಮರ್ಥ್ಯಕ್ಕೆ) ಉದ್ದೇಶಿಸಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದಂತೆ ತುಮಕೂರು, ಮೈಸೂರು ಜಿಲ್ಲೆಗಳಲ್ಲಿ ಈಗಾಗಲೇ ಪೆರಿಫೆರಲ್ ಕ್ಯಾನ್ಸರ್ ಕೇಂದ್ರಗಳ ಕಟ್ಟಡಗಳ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು ಉಪಕರಣಗಳನ್ನು ಅಳವಡಿಸುವ ಹಾಗೂ ಅಗತ್ಯ ಮಾನವ ಸಂಪನ್ಮೂಲವನ್ನು ಸೃಜಿಸುವ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.<br><br>ಬೆಳಗಾವಿ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ಸ್ಥಾಪಿಸಲು ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.<br><br>ಎಲ್ಲಾ ಜಿಲ್ಲೆಗಳಲ್ಲಿಯೂ ಡೇ-ಕೇರ್ ಕೀಮೋಥೆರಪಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ರೋಗಿಗಳಿಗೆ ತಮ್ಮ ವಾಸಸ್ಥಾನದ ಹತ್ತಿರದಲ್ಲಿ ಉನ್ನತ ಕ್ಯಾನ್ಸರ್ ಚಿಕಿತ್ಸೆಯನ್ನು ನೀಡಲು ನಿರ್ಧರಿಸಲಾಗಿದೆ. ಇದರಿಂದ ಕಿದ್ವಾಯಿ ಸಂಸ್ಥೆಯ ಮೇಲಿನ ಒತ್ತಡವು ಕಡಿಮೆಯಾಗುತ್ತದೆ. |

**ಸಂಖ್ಯೆ:** ಎಂಇಡಿ 179 ಕೆಯುಎಂ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

# ಅನುಬಂಧ-1

**Hospital Statistics**

| Des | 2024-2025 | Average Patients Per Month |
|---|---|---|
| OPD | 4,02,010 | 33,501 |
| IPD | 21,817 | 1,818 |
| CT Scan | 25,997 | 2166 |
| MRI | 9397 | 783 |
| Utrasound | 21,914 | 1826 |
| X-ray and radiography | 29,436 | 2453 |
| Mamography | 3819 | 318 |
| Utrasound biopsy | 10,147 | 846 |
| Echo | 22,865 | 1905 |
| DSA | 505 | 42 |
| PET-Scan | 13944 | 1162 |
| Biochemistry | 767186 | 63932 |
| Microbiology | 98253 | 8188 |
| Pathology | 163389 | 13616 |
| Nuclearmedicine (excluding pet scan) | 3645 | 304 |

## ಅನುಬಂಧ-2

| Hospital Statistics: 2024-25 | | |
|---|---|---|
| **State** | **No** | **%** |
| Karnataka | 17,594 | 81.4% |
| Other than Karnataka | 4014 | 18.6% |